UNIVERSITY LIBRARY
WEDNESDAY 23-07-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಕೃಷಿ ಮಾಧ್ಯಮ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿ ಹಳೆ ವಿದ್ಯಾರ್ಥಿಗಳ ಸಂಘವು ಕೃಷಿ ತಂತ್ರಜ್ಞಾನಗಳ ಪ್ರಸರಣದ ವೇಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೃಷಿ ಮಾಧ್ಯಮ ಪ್ರಶಸ್ತಿಯನ್ನು ಪ್ರಾರಂಭಿಸಿದೆ.

'ಹೊಂಬಾಳೆ ಸಂಹಿತ ಹರಿಣಿ ಕುಮಾರ್ ಕೃಷಿ ಮಾಧ್ಯಮ ಪ್ರಶಸ್ತಿ-2025' ಕ್ಕೆ ಮುದ್ರಣ ಮತ್ತು ವಿದ್ಯಮಾನ ಮಾಧ್ಯಮದ ಪತ್ರಕರ್ತರು, ವರದಿಗಾರರು, ನಿರೂಪಕರು, ಅಧಿಕಾರಿಗಳು ಮತ್ತು ವಿಸ್ತರಣ ಕಾರ್ಯಕರ್ತರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ಹತ್ತು ಸಾವಿರ ನಗದು, ಪ್ರಮಾಣ ಪತ್ರ ಒಳಗೊಂಡಿರುತ್ತದೆ. ಭರ್ತಿಮಾಡಿದ ಅರ್ಜಿಗಳನ್ನು ಹಳೆಯ ವಿದ್ಯಾರ್ಥಿಗಳ ಸಂಘ, ಕೃಷಿ ವಿಶ್ವವಿದ್ಯಾಲಯ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು-24 ಇವರಿಗೆ ಆಗಸ್ಟ್ 14ರೊಳಗೆ ಸಲ್ಲಿಸಬೇಕು ಎಂದು ಕೃಷಿ ವಿವಿ ಹಳೆ ವಿದ್ಯಾರ್ಥಿಗಳ ಸಂಘದ ಕಾರ್ಯಕಾರಿಣಿ ಸದಸ್ಯ ಕೆ. ಶಿವರಾಮು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ ದೂರವಾಣಿ: 080-23410754 ಮಿಂಚಂಚೆ: alumniuasb83@gmail.com: www.alumniuasb.in

V-karnataka pg 05

ರೈತರಿಗೆ ಚಲುವರಾಯಸ್ವಾಮಿ ಮನವಿ | 8 ಲಕ್ಷ ಮೆಟ್ರಿಕ್ ಟನ್ ರಾಜ್ಯದಲ್ಲಿ ಲಭ್ಯ | ಅವಧಿಗೆ ಸರಿಯಾಗಿ ಪೂರೈಕೆ

ಯೂರಿಯಾ ಕೊರತೆಯಿಲ್ಲ, ಆತಂಕ ಬೇಡ

ರಸಗೊಬ್ಬರ ಸಿಗದೆ ಹಲವೆಡೆ ಪರದಾಟ

■ **ವಿಕ ಸುದ್ದಿಲೋಕ** ಬೆಂಗಳೂರು



ರಾಜ್ಯದಲ್ಲಿ ಸದ್ಯದ ಕೃಷಿ ಚಟುವಟಿಕೆಗೆ ಅಗತ್ಯ ಪ್ರಮಾಣದ ಯೂರಿಯಾ ಗೊಬ್ಬರ ದಾಸ್ತಾನು ಇದ್ದು, ರೈತರು ಆತಂಕಕ್ಕೆ ಒಳಗಾಗುವುದು ಬೇಡ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ಹಾವೇರಿ, ಚಿತ್ರದುರ್ಗ, ಬೆಳಗಾವಿ ಮತ್ತಿತರ ಕಡೆಗಳಲ್ಲಿ ರಸಗೊಬ್ಬರ ಸಿಗದೆ ಗೊಂದಲ ಸೃಷ್ಟಿಯಾಗಿರುವ ಹಿನ್ನೆಲೆಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಸಚಿವರು, ''ಮುಂದಿನ ತಿಂಗಳು ಬೇಕಾದ ರಸಗೊಬ್ಬರಕ್ಕೆ ರೈತರು ಈಗಲೇ ಖರೀದಿಗೆ ಮುಂದಾಗಿರುವ ಕಾರಣ ಒತ್ತಡ ಆಗಿರಬಹುದು. ತಡವಾದರೆ ಸಿಗದಿರಬಹುದು ಎಂಬ ಆತಂಕವನ್ನು ರೈತರು ಬಿಡಬೇಕು,'' ಎಂದು ಮನವಿ ಮಾಡಿದರು.

ಕೊರತೆ ಸತ್ಯ: ''ಇಡೀ ದೇಶದಲ್ಲಿ ರಸಗೊಬ್ಬರದ ಸಮಸ್ಯೆ ಇರುವುದು ಸತ್ಯ. ಇರಾನ್ ಯುದ್ಧದ ಕಾರಣಕ್ಕೆ ರಸಗೊಬ್ಬರ ಆಮದು ಆಗುತ್ತಿಲ್ಲ ಮತ್ತು ಚೀನಾ ರಫ್ತು ಸ್ಥಗಿತ ಮಾಡಿರುವುದರಿಂದ ಗೊಬ್ಬರ ಸಮಸ್ಯೆ ಇದೆ. ಕೇಂದ್ರದಿಂದ ರಾಜ್ಯಗಳಿಗೆ ನಿಗದಿತ ಪ್ರಮಾಣದಲ್ಲಿ ಗೊಬ್ಬರ ಪೂರೈಕೆ ಆಗುತ್ತಿಲ್ಲ. ಆದರೆ, ರಾಜ್ಯದಲ್ಲಿ ಅಗತ್ಯ ಪ್ರಮಾಣದ ದಾಸ್ತಾನು ಇರುವ ಕಾರಣ ಸದ್ಯಕ್ಕೆ ಸಮಸ್ಯೆ ಇಲ್ಲ'' ಎಂದು ಹೇಳಿದರು.

''8 ಲಕ್ಷ ಮೆಟ್ರಿಕ್ ಟನ್ ಯೂರಿಯಾ ದಾಸ್ತಾನು ಇದ್ದು, ವಿತರಣೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸವಾದ ಮಾತ್ರಕ್ಕೆ ರೈತರು ಆತಂಕಪಡಬೇಕಿಲ್ಲ. ಇಲಾಖೆ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿಕೊಡುತ್ತಿದ್ದು, ಕೇಂದ್ರ ಸರಕಾರದ ಜತೆಗೂ ಸಂಪರ್ಕದಲ್ಲಿದ್ದಾರೆ,'' ಎಂದು ತಿಳಿಸಿದರು.

ಕೇಂದ್ರದ ಸಹಕಾರ: ''ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಕೇಂದ್ರ ಕೃಷಿ ಸಚಿವಾಲಯದಿಂದ ಸಂಪೂರ್ಣ ಸಹಕಾರವಿದ್ದು, ಇಲಾಖೆಯ ಎಲ್ಲ ಬೇಡಿಕೆ ಮತ್ತು ಮನವಿಗಳಿಗೂ ಸಕಾರಾತ್ಮಕ ಸ್ಪಂದನೆ ಸಿಗುತ್ತಿದೆ. ಬೇರೆ ಇಲಾಖೆಗಳ ವಿಚಾರ ಗೊತ್ತಿಲ್ಲ,'' ಎಂದು ಹೇಳಿದರು.

ಬಳ್ಳಾರಿ ಜಿಲ್ಲೆಯಲ್ಲಿ ಸಮೃದ್ಧಿ

ಬಳ್ಳಾರಿ ಜಿಲ್ಲೆಯಲ್ಲಿ ಈ ಮುಂಗಾರಿಗೆ 19ಸಾವಿರ ಮೆಟ್ರಿಕ್ ಟನ್ ಯೂರಿಯಾ ಗೊಬ್ಬರ ಬೇಡಿಕೆಯಿದ್ದು, 27ಸಾವಿರ ಮೆಟ್ರಿಕ್ ಟನ್ ಸರಬರಾಜು ಆಗಿದೆ. ಈಗಾಗಲೇ 19ಸಾವಿರ ಮೆಟ್ರಿಕ್ ರೈತರಿಗೆ ವಿತರಿಸಲಾಗಿದೆ. ಇನ್ನೂ 8140 ಟನ್ ಯೂರಿಯಾ ಗೊಬ್ಬರ ದಾಸ್ತಾನು ಇದೆ. ಜಿಲ್ಲೆಯಲ್ಲಿ ಯೂರಿಯಾ ಗೊಬ್ಬರದ ಕೊರತೆಯಿಲ್ಲ. ಕೆಲವೆಡೆ ಅಗತ್ಯಕ್ಕಿಂತ ಹೆಚ್ಚಾಗಿ ರೈತರು ಖರೀದಿ ಮಾಡುತ್ತಿರುವುದರಿಂದ ಪರದಾಟವಿದೆ. ಪಕ್ಕದ ವಿಜಯನಗರ ಜಿಲ್ಲೆಯಲ್ಲೂ ಬೇಡಿಕೆಗಿಂತ ಹೆಚ್ಚಿನ ಪ್ರಮಾಣದ ಯೂರಿಯಾ ಪೂರೈಕೆಯಾಗಿದ್ದು, ರೈತರ ಪರದಾಟ ಅಷ್ಟಾಗಿ ಕಾಣಿಸಿಲ್ಲ.

■ **ವಿಕ ಸುದ್ದಿಲೋಕ** ಹಾವೇರಿ/ಚಿತ್ರದುರ್ಗ/ದಾವಣಗೆರೆ

ಹಾವೇರಿ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಯೂರಿಯಾ ರಸಗೊಬ್ಬರಕ್ಕೆ ರೈತರು ಮಂಗಳವಾರ ಮುಗಿಬಿದ್ದಿದ್ದರು. ಕೆಲವು ಗ್ರಾಮಗಳ ವ್ಯವಸಾಯ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿಯಲ್ಲಿ ರೈತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು.

ಹಾವೇರಿ ತಾಲೂಕಿನ ಕಾಟೇನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 30 ಟನ್ ಯೂರಿಯಾ ರಸಗೊಬ್ಬರ ದಾಸ್ತಾನು ಬಂದಿದ್ದು, ಮಂಗಳವಾರ ಬೆಳಗ್ಗೆ ವಿತರಣೆ ಮಾಡಲಾಗುತ್ತದೆ ಎಂಬ ಸುದ್ದಿ ಹರಡುತ್ತಿದ್ದಂತೆ ಕಾಟೇನಹಳ್ಳಿ, ಹನುಮನಹಳ್ಳಿ, ತಿಮ್ಮೇನಹಳ್ಳಿಗಳ ನೂರಾರು ರೈತರು ಮುಗಿಬಿದ್ದಿದ್ದರು. ಬೆಳಗ್ಗೆ 7ರಿಂದಲೇ ರೈತರು ಸರತಿಯಲ್ಲಿ ನಿಂತಿದ್ದರು. ಕೆಲಹೊತ್ತು ನೂಕುನುಗ್ಗಲು ಉಂಟಾಗಿ, ಗದ್ದಲವೂ ಆಯಿತು. ದಟ್ಟಣೆ ನಿಯಂತ್ರಿಸಲು ಪೊಲೀಸರು ಆಗಮಿಸಿದ್ದರು. ರೈತರಿಗೆ ತಲಾ ಒಂದು ಖಾತೆಗೆ 3 ಚೀಲ ಯೂರಿಯಾ ಹಾಗೂ ಒಂದು ಜಿಂಕ್‌ಗಳಂತೆ ವಿತರಣೆ ಮಾಡಲಾಯಿತು.

ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗುತ್ತಿದ್ದು, ಮೆಕ್ಕೆಜೋಳ, ಸೋಯಾಬಿನ್, ಹತ್ತಿ, ಶೇಂಗಾ ಬೆಳೆಗಳಿಗೆ ಮೇಲುಗೊಬ್ಬರ ಹಾಕಲು ಯೂರಿಯಾ ಅಗತ್ಯ ಇದೆ. ಆದ್ದರಿಂದ ಬೇಡಿಕೆಗನುಗುಣವಾಗಿ ಯೂರಿಯಾ ಪೂರೈಸಬೇಕೆಂದು ಕಾಟೇನಹಳ್ಳಿಯ ರೈತರು ಒತ್ತಾಯಿಸಿದರು.

ಬೆಳಗ್ಗೆ 5ಕ್ಕೆ ರೈತರ ಸಾಲು: ದಾವಣಗೆರೆ ಜಿಲ್ಲೆ ಜಗಳೂರು ತಾಲೂಕಿನಲ್ಲಿ ಯೂರಿಯಾ ಗೊಬ್ಬರಕ್ಕೆ ಹಾಹಾಕಾರ ಸೃಷ್ಟಿಯಾಗಿದ್ದು, 180 ಪ್ಯಾಕೇಟ್ ಯೂರಿಯಾ ಗೊಬ್ಬರ ಪಟ್ಟಣದ ಅಂಗಡಿಯೊಂದಕ್ಕೆ ಬಂದಿದೆ ಎಂದು ಗೊತ್ತಾಗುತ್ತಿದ್ದಂತೆ ಮಂಗಳವಾರ ಬೆಳಗ್ಗೆ 5 ಗಂಟೆಯಿಂದ ರೈತರು ಜಿಟಿಜಿಟಿ ಮಳೆಯನ್ನೂ ಲೆಕ್ಕಿಸದೇ ಸರತಿ ಸಾಲಿನಲ್ಲಿ ನಿಂತ ದೃಶ್ಯ ಕಂಡು ಬಂತು.

ಹರಳು ಯೂರಿಯಾಕ್ಕೆ ರೈತರ ಪಟ್ಟು: ಚಿತ್ರದುರ್ಗ ಜಿಲ್ಲೆಯಲ್ಲಿ 91284 ಹೆಕ್ಟೇರ್ ಗುರಿಗೆ 82,085 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುವ ಮೆಕ್ಕೆಜೋಳಕ್ಕೆಗ ಯೂರಿಯಾ ಅತ್ಯಗತ್ಯವಾಗಿ ಕೊಡಬೇಕಿದ್ದು, ಯೂರಿಯಾ ಲಭ್ಯತೆ, ಬಳಕೆ ಕುರಿತು ಕೃಷಿ ಇಲಾಖೆ ಅಧಿಕಾರಿಗಳು ಮತ್ತು ರೈತರ ನಡುವೆ ಭಿನ್ನ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಕೃಷಿ ಇಲಾಖೆ ಹೆಚ್ಚು ಪರಿಣಾಮಕಾರಿಯಾಗಿರುವ ನ್ಯಾನೋ ಯೂರಿಯಾ ಬಳಕೆ ಮಾಡುವಂತೆ ರೈತರಲ್ಲಿ ಮನವಿ ಮಾಡುತ್ತಿದ್ದರೂ, ಬಳಕೆ ಸ್ನೇಹಿಯಾಗಿರುವ ಹರಳಿನ ಯೂರಿಯಾ ಬೇಕೆಂದು ರೈತರು ಪಟ್ಟು ಹಿಡಿದಿದ್ದಾರೆ.

ಮೆಕ್ಕೆಜೋಳ ಬಿತ್ತನೆ ಮಾಡಿ ಒಂದೂವರೆ ತಿಂಗಳು ಕಳೆದಿದೆ. ಈಗ ಮಳೆ ಆಗುತ್ತಿರುವುದರಿಂದ ಎಲ್ಲ ಕಡೆ ಯೂರಿಯಾಗೆ ಬೇಡಿಕೆ ಹೆಚ್ಚುತ್ತಿದೆ. ರೈತರು ದಿನ ಬೆಳಿಗಾದರೆ ಕೃಷಿ ಪತ್ತಿನ ಸಹಕಾರ ಸಂಘಗಳು, ಗೊಬ್ಬರದ ಅಂಗಡಿಗಳು, ಸೊಸೈಟಿಗಳ ಮುಂದೆ ಯೂರಿಯಾಕ್ಕಾಗಿ ಕಾದು ಕುಳಿತಿದ್ದಾರೆ.

51 ಸಾವಿರ ಟನ್ ಬೇಡಿಕೆ: ಕೊಪ್ಪಳ ಜಿಲ್ಲೆಯಲ್ಲೂ ಯೂರಿಯಾ ಗೊಬ್ಬರಕ್ಕಾಗಿ ರೈತರ ಪರದಾಟ ಕಂಡುಬಂತು. ಮುಂಗಾರಿಗೆ 51,286 ಟನ್ ಯೂರಿಯಾ ಬೇಡಿಕೆಯಿದ್ದು, ಈವರೆಗೆ 27,747 ಟನ್ ವಿತರಣೆಯಾಗಿದೆ. 4,663 ಟನ್ ದಾಸ್ತಾನು ಇದೆ. 1080 ಟನ್ ಕೋರಮಂಡಲ್‌ನಿಂದ ಹಾಗೂ 400 ಟನ್ ಬಳ್ಳಾರಿಯಿಂದ ಮಂಗಳವಾರ ಜಿಲ್ಲೆಗೆ ಬಂದಿದೆ. ಆದರೆ, ರೈತರು ಹೆಚ್ಚಿನ ಮಟ್ಟದಲ್ಲಿ ಯೂರಿಯಾ ಖರೀದಿಗೆ ಮುಗಿಬಿದ್ದಿರುವುದರಿಂದ ಸಮಸ್ಯೆಯಾಗಿದೆ.



ಹಾವೇರಿ ತಾಲೂಕು ಕಾಟೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಚೇರಿ ಎದುರು ಯೂರಿಯಾ ಗೊಬ್ಬರ ಪಡೆಯಲು ರೈತರು ಮುಗಿಬಿದ್ದರು.

ಡಿಎಪಿ ಆಮದು ನೋಟ



ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಹಾಯಕ ಸಚಿವೆ ಅನುಪ್ರಿಯಾ ಪಟೇಲ್ ಮಂಗಳವಾರ ಲೋಕಸಭೆಗೆ ನೀಡಿದ ಲಿಖಿತ ಉತ್ತರದ ಮೂಲಕ ರಸಗೊಬ್ಬರ ಸ್ಥಿತಿಗತಿಯ ಸ್ಪಷ್ಟ ಚಿತ್ರಣ ಒದಗಿಸಿದ್ದಾರೆ.

ವರ್ಷವಾರು ಡಿಎಪಿ ಆಮದು

2024-25	45.69
2023-24	55.67
2022-23	65.83
2021-22	54.62
2020-21	48.82

ಈ ವರ್ಷ ಡಿಎಪಿ ಆಮದು

ಏಪ್ರಿಲ್-ಜೂನ್	9.74
ಏಪ್ರಿಲ್	2.89
ಮೇ	2.36
ಜೂನ್	4.49

ಲಕ್ಷ ಟನ್‌ಗಳಲ್ಲಿ

ರಸಗೊಬ್ಬರ ಅಗತ್ಯವನ್ನು ಪೂರೈಸಲು ಲಭ್ಯತೆಯನ್ನು ಕೇಂದ್ರ ಸರಕಾರ ಖಚಿತಪಡಿಸಿಕೊಳ್ಳುತ್ತಿದೆ. ಬಿತ್ತನೆಯ ವ್ಯಾಪ್ತಿ ಹೆಚ್ಚಳ ಮತ್ತು ಮುಂಗಾರಿನ ಪರಿಸ್ಥಿತಿಯಿಂದಾಗಿ 2025ರ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರಗಳ ಬೇಡಿಕೆ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. 2010ರ ಏಪ್ರಿಲ್‌ನಿಂದ ಕೇಂದ್ರ ಸರಕಾರ ರಂಜಕ ಹಾಗೂ ಪೊಟ್ಯಾಶ್ ರಸಗೊಬ್ಬರದ ಸಹಾಯಧನವನ್ನು ಜಾರಿಗೆ ತಂದಿದೆ. **-ಅನುಪ್ರಿಯಾ ಪಟೇಲ್** ಕೇಂದ್ರ ಸಚಿವೆ

V-karnataka pg 06

ರಾಜ್ಯದೆಲ್ಲೆಡೆ ಡಿಎಪಿ, ಯೂರಿಯಾ ಗೊಬ್ಬರದ ಅಭಾವ ಎದುರಾಗಿದೆ. ದೊರೆತರೂ ಹೆಚ್ಚಿನ ಹಣ ಕೊಡಬೇಕಿದೆ. ಷಡ್ಯಂತ್ರದ ಮೂಲಕ ಗೊಬ್ಬರ ಅಭಾವ ಸೃಷ್ಟಿಸಿದ್ದರಿಂದ ರೈತರಿಗೆ ಸಂಕಷ್ಟ ಎದುರಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ರೈತರು ಕೇಳಿದ ಗೊಬ್ಬರ ಸಿಗುವಂತೆ ಕೇಂದ್ರ ಹಾಗೂ ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕು.

-ಚಾಮರಸ ಮಾಲಿಪಾಟೀಲ
ರಾಜ್ಯ ರೈತ ಸಂಘದ ಗೌರವಾಧ್ಯಕ್ಷ



ಕಹಿ ಬೇವು ಕೋನಾಪುರ ರೈತರಿಗೆ ಸಿಹಿ

ಅಜ್ಜೇರಿ ತಿಪ್ಪೇಸ್ವಾಮಿ

ಬೇವಿನ ಬೀಜ ಕಹಿ ನಿಜ, ಆದರೆ ಇದನ್ನು ನಂಬಿಕೊಂಡ ಕೋನಾಮರ ಗ್ರಾಮದ ರೈತರ ಬದುಕಿಗೆ ಸಿಹಿ ಉಣಿಸಿದೆ. ಗ್ರಾಮದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಬೇವಿನ ಬೀಜ ಸಂಗ್ರಹಿಸಿ ಮಾರುವ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕೋನಾಪುರ ಗ್ರಾಮದ ರೈತ ಕಾರ್ಮಿಕರ ಶ್ರಮದ ಬೆವರು ಇದಕ್ಕೆ ಸಾಕ್ಷಿ. ಗ್ರಾಮವು ಸುಮಾರು 500 ಮನೆಗಳಿಂದ ಕೂಡಿದ್ದು, ಪರಿಶಿಷ್ಟರೇ ತುಂಬಿರುವ ಬಹುದೊಡ್ಡ ಗ್ರಾಮ. ಬೇವಿನ ಹಣ್ಣು ಬಿಡುವ ಕಾಲದಲ್ಲಿ ಬೆಳಿಗಿನ ಜಾವ ನಾಲ್ಕು ಗಂಟೆಗೆ ತಮ್ಮ ಊರಿನಿಂದ ಸುಮಾರು ನೂರು ಕಿಲೋಮೀಟರ್ ದೂರದ ಸಿರಿಗೆರೆ, ಚಿತ್ರದುರ್ಗ, ಜಗಳೂರು, ಸಂಡೂರು, ನಂದಿಹಳ್ಳಿ, ಆಂಧ್ರದ ಅನಂತಪುರ ಜಿಲ್ಲೆಯ ಹಳ್ಳಿಗಳಿಗೆ ತೆರಳಿ ಊರಿನ ರಸ್ತೆ ಬದಿ, ಜಮೀನುಗಳಲ್ಲಿ ಉದುರಿರುವ ಬೇವಿನ ಬೀಜ ಸಂಗ್ರಹಿಸುತ್ತಾರೆ. ಒಬ್ಬ ವ್ಯಕ್ತಿ ದಿನಕ್ಕೆ 10 ಡಬ್ಬಿಯಷ್ಟು ಬೀಜ ಸಂಗ್ರಹಿಸಿ ಮಾರುತ್ತಾನೆ. ಒಂದು ಡಬ್ಬಿಗೆ ನೂರು ರೂಪಾಯಿ ನಿಗದಿಪಡಿಸಿ ಖರೀದಿಸಲಾಗುತ್ತಿದೆ.

ಜಾಗತಿಕ ಮಾರುಕಟ್ಟೆಗೆ ಲಗ್ಗೆ

ಬೇವಿನ ಬೀಜಗಳ ವ್ಯಾಪಾರ ಒಂದು ಲಾಭದಾಯಕ ಉದ್ಯಮವಾಗಿದ್ದು, ಬೇವಿನ ಬೀಜದಿಂದ ಎಣ್ಣೆ, ಹಿಂಡಿಯನ್ನು ಮಣ್ಣಿನ ಸುಧಾರಣೆಗೆ ಬಳಸಿದಾಗ ಜೈವಿಕ ವಸ್ತುವಿನೊಂದಿಗೆ ಮಣ್ಣನ್ನು ಉತ್ಕೃಷ್ಟಗೊಳಿಸುವುದಷ್ಟೇ ಅಲ್ಲ, ನೈಟ್ರೀಕರಣವನ್ನು ತಡೆಯುವ ಮೂಲಕ ಸಾರಜನಕದ ನಷ್ಟವನ್ನು ಕಡಿಮೆ ಮಾಡುತ್ತದೆ.

ಬೇವಿನ ಎಲೆಯಲ್ಲಿ ಪ್ರೋಟಿನ್, ವಿಟಮಿನ್ ಸಿ ಮತ್ತು ಕ್ಯಾರೋಟಿನ್‌ಗಳು ಸಮೃದ್ಧವಾಗಿದ್ದು, ಇದು ಬ್ಯಾಕ್ಟೀರಿಯಾ ವಿರೋಧಿ ಮತ್ತು ನಂಜು ನಿರೋಧಕ ಗುಣಗಳನ್ನು ಸಹ ಹೊಂದಿದೆ. ಹಲ್ಲುಜ್ಜಲು ಬೇವಿನ ಪುಡಿ, ಯುಗಾದಿಯಲ್ಲಿ ಬೇವಿನ ಹೂವು ಮತ್ತು ಜ್ವರ ಕಡಿಮೆ ಮಾಡಲು ಬೇವಿನ ಎಲೆಗಳನ್ನು ಬಳಸುತ್ತೇವೆ, ವಾಸ್ತವವಾಗಿ ಬೇವು ಒಂದು ಔಷಧೀಯ ಮರವಾಗಿದ್ದು, ಅದು ಅನೇಕ ಆರೋಗ್ಯ ಪ್ರಯೋಜನಗಳನ್ನು ನೀಡುತ್ತದೆ.

> ಸತತ ಒಂದು ತಿಂಗಳ ಶ್ರಮದಿಂದ ಸಂಗ್ರಹಿಸಿದ ಬೇವಿನ ಬೀಜ 140 ಚೀಲ ಆಗಿದ್ದು, ಒಟ್ಟು ಏಳು ಟನ್ ತೂಕ ಬಂದಿದೆ. ಈಗ ಒಂದು ಕ್ವಿಂಟಲ್‌ಗೆ 1200 ದರ ಸಿಕ್ಕಿದೆ. ನಾವು ಬೀಜ ಸಂಗ್ರಹಿಸುವ ಕೂಲಿಕಾರರ ಬಳಿ ನೂರು ರೂಪಾಯಿಗೆ ಒಂದು ಡಬ್ಬಿಯಂತೆ ಖರೀದಿ ಮಾಡಿದ್ದೇವೆ. ವ್ಯಾಪಾರಕ್ಕಾಗಿ ದಲ್ಲಾಳಿಗಳ ಬಳಿ ಹಣ ಪಡೆದಿದ್ದು, ಪಟ್ಟಿ ಆದ ನಂತರ 30ರಿಂದ 40 ಸಾವಿರ ರೂ. ಲಾಭ ಸಿಗಬಹುದು ಎಂಬ ನಿರೀಕ್ಷೆ ನಮ್ಮದಾಗಿದೆ.
>
> ■ ಹನುಮಕ್ಕ
> | ಬೇವಿನ ಬೀಜ ವ್ಯಾಪಾರಿ, ಕೋನಾಪುರ.



- ದಿನಕ್ಕೆ 10 ಡಬ್ಬಿ ಸಂಗ್ರಹಣೆ
- ಒಂದು ಡಬ್ಬಿಗೆ 100 ರೂ ನಿಗದಿ
- ಜಾಗತಿಕ ಮಾರುಕಟ್ಟೆಯಲ್ಲಿ ಬೇಡಿಕೆ

ಕೀಟನಾಶಕ, ಔಷಧ ಮತ್ತು ಸೌಂದರ್ಯವರ್ಧಕ ಉತ್ಪನ್ನಗಳು ತಯಾರಿಸಬಹುದಾಗಿದೆ. ಸಾವಯವ ಕೃಷಿಗೆ ಉಪಯೋಗಿಸುವುದರಿಂದ ಜಾಗತಿಕ ಮಾರುಕಟ್ಟೆಯಲ್ಲಿ ಬೇವಿನ ಬೀಜಕ್ಕೆ ಹೆಚ್ಚಿನ ಬೇಡಿಕೆ ಇದೆ. ಬೇವಿನ ಬೀಜಗಳ ರಫ್ತುದಾರರಲ್ಲಿ ಅಗ್ರ 3 ರಾಷ್ಟ್ರಗಳಾದ ಭಾರತ, ಶ್ರೀಲಂಕಾ ಮತ್ತು ಈಜಿಪ್ಟ್‌ಗಳ ಪೈಕಿ ಭಾರತ ಮುಂಚೂಣಿಯಲ್ಲಿದೆ.ಬೇವಿನ ಬೀಜದ ಸಂಗ್ರಹಣ ಪದ್ಧತಿಗಾಗಿ ತಮಿಳುನಾಡಿನ ವಿವಿಧ ಸಂಸ್ಥೆಗಳು ಸಂಶೋಧನೆಗಳನ್ನು ಕೈಗೊಂಡಿವೆ.

ಕೀಟನಾಶಕ ಗುಣ

ಬೇವಿನ ಬೀಜಗಳು ಕೀಟನಾಶಕ ಮತ್ತು ಔಷಧೀಯ ಗುಣಗಳನ್ನು ಹೊಂದಿದ್ದು, ಅದರಿಂದ ಅನೇಕ ಬೆಳೆಗಳಿಗೆ ಕೀಟ ನಿಯಂತ್ರಣಕ್ಕಾಗಿ ಬಳಸಲಾಗುತ್ತದೆ. ಬೀಜದ

> ಗ್ರಾಮೀಣ ಭಾಗದ ಕೂಲಿಕಾರರಿಗೆ ಆಸರೆಯಾಗಲು ಮುಂಗಡ ಹಣ ನೀಡಿ, ಬೀಜ ಸಂಗ್ರಹಿಸಿ ಅವರ ಎದುರೇ ತೂಕ ಮಾಡಿಕೊಂಡು ಮಾರುಕಟ್ಟೆ ದರಕ್ಕೆ ಕೊಂಡುಕೊಳ್ಳುತ್ತೇವೆ. ಈಗ ಒಂದು ಕೆ.ಜಿ. ಬೀಜಕ್ಕೆ 15 ರೂಪಾಯಿಯಂತೆ ದರ ನಿಗದಿಪಡಿಸಿ ತೂಕ ಮಾಡಲಾಗಿದೆ.
>
> ■ ರೇವಣಸಿದ್ದಪ್ಪ
> | ದಲ್ಲಾಳಿ ವ್ಯಾಪಾರಿ, ಚಿತ್ರದುರ್ಗ

ಬೇವಿನ ಬೀಜಗಳ ವ್ಯಾಪಾರ ಒಂದು ಲಾಭದಾಯಕ ಉದ್ಯಮವಾಗಿದೆ. ಕೋನಾಪುರದ ರೈತರು ಬೇವಿನ ಬೀಜ ಸಂಗ್ರಹಿಸಿ ಮಾರಾಟ ಮಾಡಿ ತುತ್ತಿನ ಚೀಲ ತುಂಬಿಕೊಳ್ಳುತ್ತಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಇರುವುದು ರೈತರ ಪಾಲಿಗೆ ವರದಾನವಾಗಿದೆ.

S-karnataka pg 08



ರುಚಿಕರ ಸೊಹರಿ ಎಲೆಯೂಟ

ಬಾಳೆಎಲೆ ಊಟದಂತೆ ಈಗ ಸೊಹರಿ ಎಲೆಯ ಊಟ ಆಹಾರ ಪ್ರಿಯರ ಗಮನ ಸೆಳೆದಿದೆ. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಟ್ರಿನಿಡಾಡ್ ಮತ್ತು ಟೊಬ್ಯಾಗೊಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸೊಹರಿ ಎಲೆಯೂಟ ಸವಿದಿದ್ದರು. ಈಗ ಇದರ ಆರೋಗ್ಯ ಪ್ರಯೋಜನಗಳ ಬಗ್ಗೆ ಜನರು ಆಸಕ್ತರಾಗಿದ್ದಾರೆ.



ಲವಲVK ಸುದ್ದಿಲೋಕ
feedbacklvk@vijaykarnataka.com

ಪ್ರಧಾನಿ ನರೇಂದ್ರ ಮೋದಿ ವಿದೇಶ ಪ್ರವಾಸ ಹೋದಾಗಲೆಲ್ಲ ಅಲ್ಲಿ ಅವರು ಥರಿಸುವ ಉಡುಗೆ ತೊಡುಗೆ, ತಿನ್ನುವ ಆಹಾರ ಇತ್ಯಾದಿ ಟ್ರೆಂಡಿಂಗ್‌ನಲ್ಲಿರುತ್ತವೆ. ಇದರಂತೆ ಅವರ ಟ್ರಿನಿಡಾಡ್ ಮತ್ತು ಟೊಬ್ಯಾಗೊ ಪ್ರವಾಸ ಸಂದರ್ಭದಲ್ಲಿ ಸುದ್ದಿಯಾದ ಆಹಾರ ವಿಶೇಷವೆಂದರೆ ಸೊಹರಿ ಎಲೆಯೂಟ. ಅಲ್ಲಿ ಮೋದಿಯವರಿಗೆ ಆಯೋಜಿಸಿದ್ದ ವಿಶೇಷ ಭೋಜನಕೂಟದಲ್ಲಿ ಬಾಳೆಎಲೆಯಂತೆಯೇ ಕಾಣುವ ಹಸಿರು ಬಣ್ಣದ ದೊಡ್ಡ ಸೊಹರಿ ಎಲೆಯಲ್ಲಿ ಊಟ ಬಡಿಸಲಾಗಿತ್ತು. ಅಲ್ಲಿರುವ ಭಾರತೀಯ ಮೂಲದವರ ಸಾಂಪ್ರದಾಯಿಕ ಆಹಾರ ಪದ್ಧತಿಯಾಗಿರುವ ಈ ಎಲೆಯಲ್ಲಿ ಊಟ ಮಾಡಿರುವ ಪ್ರಧಾನಿ ಮೋದಿ ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿಯೂ ಬರೆದುಕೊಂಡಿದ್ದರು.

ಸ್ಥಳೀಯ ಸಂಸ್ಕೃತಿ

ಬಾಳೆ ಎಲೆಯನ್ನು ಹೋಲುವ ಸೊಹರಿ ಎಲೆಯನ್ನು ವೈಜ್ಞಾನಿಕವಾಗಿ ಕ್ಯಾಲಥಿಯಾ ಲೂಟಿಯಾ ಎನ್ನಲಾಗುತ್ತದೆ. ಕರಿಬಿಯನ್‌ನ ಆರ್ದ್ರ ಉಷ್ಣವಲಯ ಪ್ರದೇಶಗಳಲ್ಲಿ ಕಂಡುಬರುವ ಇದನ್ನು ಬಜಾವೊ ಅಥವಾ ಸಿಗಾರ್ ಸಸ್ಯ ಎಂದೂ ಕರೆಯಲಾಗುತ್ತಿದ್ದು, ಇದು 3 ಮೀಟರ್ ಎತ್ತರಕ್ಕೆ ಬೆಳೆಯುತ್ತದೆ ಮತ್ತು ಅದರ ಅಗಲ ಎಲೆಗಳು ಒಂದು ಮೀಟರ್‌ನಷ್ಟು ಉದ್ದವಿರುತ್ತದೆ. ಇವುಗಳನ್ನು ಅಲ್ಲಿನ ಸ್ಥಳೀಯರು ಆಹಾರವನ್ನು ಸುತ್ತಲು ಅಥವಾ ಬಡಿಸಲು ಪರಿಸರಸ್ನೇಹಿ ತಟ್ಟೆಗಳಾಗಿ ಬಳಸುತ್ತಾರೆ. ಬಿಸಿ ಬಿಸಿ ಆಹಾರಗಳನ್ನು ಬಡಿಸಲು ಸೊಹರಿ ಎಲೆಗಳು ಸೂಕ್ತವೆನ್ನಲಾಗಿದೆ.

ಭಾರತ ಮೂಲ

ಟ್ರಿನಿಡಾಡ್ ಮತ್ತು ಟೊಬ್ಯಾಗೊ ಜನಸಂಖ್ಯೆಯಲ್ಲಿ ಶೇ. 42ರಷ್ಟು ಜನರು ಭಾರತೀಯ ಮೂಲದವರು. ಸೊಹರಿ ಎಲೆಯೂಟ ಮೂಲತಃ ಭಾರತದ್ದಾಗಿದ್ದು, ಅಲ್ಲಿ ವಾಸಿಸುವ ಭಾರತೀಯರಿಗೆ ಇದು ಅವರ ಪ್ರಾಚೀನ ಸಂಪ್ರದಾಯವನ್ನು ನೆನಪಿಸುತ್ತದೆ ಎನ್ನಲಾಗಿದೆ. ಸೊಹರಿ ಎಂಬ ಪದ ಭೋಜ್‌ಪುರಿ ಭಾಷೆಯದ್ದಾಗಿದ್ದು, ಇದರರ್ಥ 'ದೇವರುಗಳಿಗೆ ಆಹಾರ' ಎನ್ನಲಾಗಿದೆ. ಭೋಜ್‌ಪುರಿಗಳು ದೀಪಾವಳಿಯಂತಹ ಹಬ್ಬಗಳಲ್ಲಿ ಸೊಹರಿ ಎಲೆಯಲ್ಲಿಯೇ ಹುಟ್ಟೂಟ ಬಡಿಸುತ್ತಾರೆ. ಈಗ ಟ್ರಿನಿಡಾಡ್‌ನಲ್ಲಿ ಪ್ರಧಾನಿ ಮೋದಿಗೆ ಈ ಎಲೆಯಲ್ಲಿ ಊಟ ಬಡಿಸುವ ಮೂಲಕ ಅಲ್ಲಿರುವ ಭೋಜ್‌ಪುರಿಗಳು ಇಲ್ಲಿನ ಆಹಾರ ಸಂಸ್ಕೃತಿಯೊಂದನ್ನು ಮುನ್ನೆಲೆಗೆ ತಂದಿದ್ದಾರೆ. ■

ಪಾಕ ಸಂಸ್ಕೃತಿ



V-karnataka pg 12

Udayavani Pg 05

ಅನಧಿಕೃತ ಕೃಷಿ ಪಂಪ್‌ಸೆಟ್‌ಗಳು 'ಕುಸುಮ್ ಬಿ' ವ್ಯಾಪ್ತಿಗೆ?

ರಾಜ್ಯದ 2.5 ಲಕ್ಷಕ್ಕೂ ಅಧಿಕ ಐಪಿ ಸೆಟ್‌ಗಳನ್ನು ಕೇಂದ್ರ ಯೋಜನೆಗೆ ಸೇರಿಸಿದರೆ ಸಬ್ಸಿಡಿ ಲಭ್ಯ | ರಾಜ್ಯಕ್ಕೂ ಲಾಭ

■ ಉದಯವಾಣಿ ಸಮಾಚಾರ

ಬೆಂಗಳೂರು: ರಾಜ್ಯದಲ್ಲಿ ಇನ್ನೂ ಬಾಕಿ ಇರುವ ಅನಧಿಕೃತ ಕೃಷಿ ಪಂಪ್‌ಸೆಟ್ (ಐಪಿ ಸೆಟ್)ಗಳನ್ನು ಕೇಂದ್ರದ ಮಹತ್ವಾಕಾಂಕ್ಷಿ 'ಕುಸುಮ್ ಬಿ' ಯೋಜನೆ ವ್ಯಾಪ್ತಿಗೆ ತರಲು ಸರ್ಕಾರ ಚಿಂತನೆ ನಡೆಸಿದೆ.

ಶಕ್ತಿ ಭವನದಲ್ಲಿ ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ 'ಕುಸುಮ್-ಬಿ' ಯೋಜನೆ ಪ್ರಗತಿ ಪರಿಶೀಲನೆ ನಡೆಸಲಾಯಿತು. ಈ ವೇಳೆ ರಾಜ್ಯದಲ್ಲಿರುವ ಅನಧಿಕೃತ ಐಪಿ ಸೆಟ್‌ಗಳನ್ನು 'ಕುಸುಮ್ ಬಿ' ಯೋಜನೆ ಅಡಿ ಅದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲು ಇರುವ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಯಿತು. ಇದನ್ನು ಮುಂಬರುವ ದಿನಗಳಲ್ಲಿ ಸಚಿವ ಸಂಪುಟದ ಮುಂದಿಟ್ಟು ಅನುಮೋದನೆಯೊಂದಿಗೆ ಅಗತ್ಯ ಕ್ರಮ ಕೈಗೊಳ್ಳುವ ಕುರಿತೂ ಪ್ರಸ್ತಾಪವಾಯಿತು ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ನಾಲ್ಕೂವರೆ ಲಕ್ಷ ಅನಧಿಕೃತ ಐಪಿ ಸೆಟ್‌ಗಳಿದ್ದವು. ಈ ಪೈಕಿ ಈಗಾಗಲೇ 2



ಲಕ್ಷ ಐಪಿ ಸೆಟ್ ಸಂಪರ್ಕಗಳನ್ನು ಅಧಿಕೃತಗೊಳಿಸಿ ಕ್ರಮ ಕೈಗೊಳ್ಳಲಾಗಿದೆ. ಇನ್ನೂ ಅಂದಾಜು ಎರಡೂವರೆ ಲಕ್ಷ ಅಧಿಕೃತ ಆಗಬೇಕಿದೆ. ಅವುಗಳನ್ನು 'ಕುಸುಮ್ ಬಿ' ಯೋಜನೆಯಡಿ ಕೈಗೆತ್ತಿಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಹಾಗೊಂದು ವೇಳೆ ಈ ನಿಟ್ಟಿನಲ್ಲಿ ಮುಂದಡಿ ಇಟ್ಟರೆ, ಕೇಂದ್ರದ ಸಬ್ಸಿಡಿಯೂ ಬರುತ್ತದೆ. ರಾಜ್ಯ ಸರ್ಕಾರಕ್ಕೂ ಅಧಿಕೃತಗೊಳಿಸುವುದರಿಂದ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಲೈನ್ ಸೇರಿದಂತೆ ಮೂಲಸೌಕರ್ಯಕ್ಕೆ ಸಂಬಂಧಿಸಿದ ಆರ್ಥಿಕ ಹೊರೆಯೂ ತಕ್ಕಮಟ್ಟಿಗೆ ತಗ್ಗಲಿದೆ ಎಂಬ ಲೆಕ್ಕಾಚಾರ ಇದರ ಹಿಂದಿದೆ ಎನ್ನಲಾಗಿದೆ.

40000 ಪಂಪ್‌ಸೆಟ್‌ಗಳಿಗೆ ಸೋಲಾರ್: ಇನ್ನು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಕುಸುಮ್ ಬಿ ಯೋಜನೆ ಅಡಿ 40 ಸಾವಿರ ಕೃಷಿ ಪಂಪ್‌ಸೆಟ್‌ಗಳಿಗೆ ಸೋಲಾರ್ ಆಳವಡಿಕೆಗೆ ಅನುಮೋದನೆ ನೀಡಲಾಗಿದ್ದು, ಇದರ ಅನುಷ್ಠಾನಕ್ಕೆ ಒತ್ತು ನೀಡಬೇಕು ಎಂದು ಸೂಚಿಸಿದರು.

ಉದ್ದೇಶಿತ ಯೋಜನೆ ಅಡಿ ಸೋಲಾರ್ ಕೃಷಿ ಪಂಪ್‌ಸೆಟ್ ಆಳವಡಿಸಲು ಕೇಂದ್ರ ಸರ್ಕಾರ ಶೇ. 30 ಹಾಗೂ ರಾಜ್ಯ ಸರ್ಕಾರ ಶೇ. 50ರಷ್ಟು ಸಬ್ಸಿಡಿ ಒದಗಿಸುತ್ತಿದ್ದು ಫಲಾನುಭವಿಗಳು ಶೇ. 20ರಷ್ಟು ಭರಿಸಬೇಕಿದೆ. ಯೋಜನೆ ಅಡಿ 40 ಸಾವಿರ ಪಂಪ್‌ಸೆಟ್‌ಗಳಿಗೆ ಅನುಮೋದನೆ ನೀಡಲಾಗಿದ್ದು, ಇದನ್ನು ಅನುಷ್ಠಾನಗೊಳಿಸುವ ಸಂಬಂಧ ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

752 ಕೋಟಿ ರೂ. ವೆಚ್ಚ: 25 ಸಾವಿರ ರೈತರು ಹೆಚ್ಚುವರಿಯಾಗಿ ಕುಸುಮ್ ಬಿ ಯೋಜನೆಯಡಿ ಅರ್ಜಿ ಸಲ್ಲಿಸಿದ್ದಾರೆ. ಯೋಜನೆಯಡಿ ರಾಜ್ಯ ಸರ್ಕಾರ 752 ಕೋಟಿ ರೂ. ವೆಚ್ಚ ಮಾಡಲಿದೆ. ಯೋಜನೆ ಸಮರ್ಪಕ ಅನುಷ್ಠಾನಗೊಳಿಸಿದ ಬಳಿಕ ಸಬ್ಸಿಡಿ ಮೊತ್ತ ಕಡಿಮೆಯಾಗಲಿದೆ. ನೀರಾವರಿ ಪಂಪ್‌ಸೆಟ್‌ಗಳಿಗೆ 2024-25ರ ಸಾಲಿನಲ್ಲಿ 12,785 ಕೋಟಿ ರೂಪಾಯಿಗಳ ಅನುದಾನ ಹಂಚಿಕೆ ಆಗಿದ್ದು, 2025ರ ಫೆಬ್ರವರಿವರೆಗೆ 11,720 ಕೋಟಿ ರೂ. ಬಿಡುಗಡೆ ಆಗಿದೆ. 2025-26ರಲ್ಲಿ 16,021 ಕೋಟಿ ರೂಪಾಯಿಗಳ ಆಯವ್ಯಯ ಹಂಚಿಕೆ ಆಗಿದೆ ಎಂದು ಅಧಿಕಾರಿಗಳು ಮಾಹಿತಿ ಒದಗಿಸಿದರು.

ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕಪ್ಪುತಲೆ ಹುಳು ಬಾಧೆ: ತೆಂಗು ಬೆಳೆ ನಷ್ಟ ಸಮೀಕ್ಷೆ

42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೋಗ ಬಾಧೆ | ಜವಾಬ್ದಾರಿ ವಹಿಸಿಕೊಂಡ ತೋಟಗಾರಿಕೆ ಇಲಾಖೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ತೆಂಗು ಬೆಳೆಯನ್ನು ಕಾಡುತ್ತಿರುವ ಕಪ್ಪುತಲೆ ಹುಳು ಬಾಧೆ ನಿಯಂತ್ರಣದ ಭಾಗವಾಗಿ ಸುಮಾರು 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ತೆಂಗು ಬೆಳೆ ಸಮೀಕ್ಷೆ ನಡೆಸಲು ತೋಟಗಾರಿಕೆ ಇಲಾಖೆ ಮುಂದಾಗಿದೆ.

ಬೆಳೆ ಸಮೀಕ್ಷೆ ಮಾದರಿಯ ತಂತ್ರಾಂಶದಿಂದ ಖಾಸಗಿ ಸಂಸ್ಥೆಗಳ ಮೂಲಕ ಸಮೀಕ್ಷೆ ನಡೆಸಲು ಇಲಾಖೆ ನಿರ್ಧರಿಸಿದ್ದು, ಈ ಉದ್ದೇಶಕ್ಕೆ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ 25 ಲಕ್ಷ ರೂ. ಅನುದಾನ ಬಳಸಿಕೊಳ್ಳುತ್ತಿದೆ.

ಕಪ್ಪುತಲೆ ಹುಳು ಬಾಧೆಯಿಂದ ತೆಂಗಿನ ಮರಗಳು ಒಣಗಿ ಇಡೀ ತೋಟಗಳೇ ನಾಶವಾಗುತ್ತಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ತುರ್ತು ಗಮನಹರಿಸಲು ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದರು. ಈ ಮನವಿಗೆ ಸ್ಪಂದಿಸಿದ್ದ ಸಿಎಂ ಈ ಕುರಿತು ಅಧ್ಯಯನ ನಡೆಸಿ ಪರಿಹಾರ ಕ್ರಮಗಳ ಕುರಿತು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದರು. ಅಂತೆಯೇ ತೋಟಗಾರಿಕೆ ನಿರ್ದೇಶನಾಲಯವು ಸಮೀಕ್ಷೆ ಪ್ರಕ್ರಿಯೆ ಕೈಗೆತ್ತಿಕೊಂಡಿದೆ.

ರಾಜ್ಯದ 7.04 ಲಕ್ಷ ಹೆಕ್ಟೇರ್ ತೆಂಗಿನ ಪ್ರದೇಶದ ಪೈಕಿ



42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಪ್ಪುತಲೆ ಹುಳುವಿನ ಬಾಧೆಯಿಂದ ಬೆಳೆ ನಷ್ಟವಾಗಿದೆ. ಹಾನಿ ಅಂದಾಜು ಮಾಡಿದ ಬಳಿಕ ಸಸ್ಯ ಸಂರಕ್ಷಣಾ ಕ್ರಮಗಳ ಕುರಿತಂತೆ ತಜ್ಞರ ಅಭಿಪ್ರಾಯ ಪಡೆದು ಸರಕಾರಕ್ಕೆ ಸೂಕ್ತ ಶಿಫಾರಸು ಮಾಡಲಾಗುತ್ತಿದೆ. ಈ ರೋಗ ಬಾಧೆ ವಿಸ್ತರಣೆಯಾಗದಂತೆ ತಡೆಯುವ ಕ್ರಮದ ಬಗ್ಗೆಯೂ ಇಲಾಖೆ ಕ್ರಮ ವಹಿಸಿದೆ.

ಈ ಕ್ರಮಗಳ ಕುರಿತಂತೆ ತೋಟಗಾರಿಕೆ ನಿರ್ದೇಶನಾಲಯವು ಇಲಾಖೆ ಕಾರ್ಯದರ್ಶಿಗೆ ಪತ್ರದ ಮೂಲಕ ಮಾಹಿತಿ ನೀಡಿದ್ದು, ಕಳೆದ ಏಪ್ರಿಲ್ ಮತ್ತು ಮೇ



ತುಮಕೂರು, ಮಂಡ್ಯ, ಹಾಸನ ಮತ್ತಿತರ ಭಾಗಗಳಲ್ಲಿ ಕಪ್ಪುತಲೆ ಹುಳು ಬಾಧೆ ತೀವ್ರಗೊಂಡು ಇಡೀ ತೋಟಗಳೇ ನಾಶವಾಗುತ್ತಿದ್ದು, ಅವಲಂಬಿತ ರೈತ ಕುಟುಂಬಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಈ ಬಗ್ಗೆ ನನ್ನ ಮನವಿ ಆಧರಿಸಿ ಸರಕಾರ ಅಧ್ಯಯನದ ಜತೆಗೆ ರೋಗ ವಿಸ್ತರಣೆ ತಡೆಗೆ ಕ್ರಮ ವಹಿಸಿರುವುದು ಉತ್ತಮ ಬೆಳವಣಿಗೆ.

- ದಿನೇಶ್ ಗೂಳಿಗೌಡ
ವಿಧಾನ ಪರಿಷತ್ ಸದಸ್ಯ

ತಿಂಗಳಿನಲ್ಲಿ ಅಧಿಕ ಉಷ್ಣಾಂಶ ಇದ್ದ ಕಾರಣದಿಂದ ತೆಂಗಿನ ಮರಗಳಲ್ಲಿ ಕಪ್ಪುತಲೆ ಹುಳುವಿನ ಬಾಧೆ ಹೆಚ್ಚಾಗಿ ಕಂಡುಬಂದಿದೆ. ಸುಮಾರು 42 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಬಾಧೆಯಿಂದ ತೆಂಗಿನ ಮರಗಳು ಹಾನಿಯಾಗಿರುವ ಅಂದಾಜಿದೆ ಎಂದು ತಿಳಿಸಿದೆ.

V-karnataka pg 07

ಸಚಿವ ಖಂಡ್ರೆ ಫರ್ಮಾನು | ದನ-ಕರು, ಕುರಿ, ಮೇಕೆ ಸೇರಿ ಸಾಕುಪ್ರಾಣಿ ಮೇಯಿಸಲು ನಿರ್ಬಂಧ

ಅರಣ್ಯಗಳಲ್ಲಿ ಜಾನುವಾರು ಪ್ರವೇಶ ನಿರ್ಬಂಧ

■ **ವಿಕ ಸುದ್ದಿಲೋಕ** ಬೆಂಗಳೂರು

ಅರಣ್ಯ ನಾಶ ತಡೆ, ವನ್ಯಜೀವಿಗಳ ಸಂರಕ್ಷಣೆ ಹಾಗೂ ಕಾಡು ಪ್ರಾಣಿ -ಮಾನವ ಸಂಘರ್ಷ ತಡೆಗೆ ಹೊಸ ಐಡಿಯಾವೊಂದನ್ನು ಕಂಡುಕೊಂಡಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಅರಣ್ಯದೊಳಗೆ ದನಕರು, ಕುರಿ, ಮೇಕೆ ಮತ್ತಿತರ ಸಾಕು ಪ್ರಾಣಿ ಮೇಯಿಸುವುದನ್ನು ನಿಷೇಧಿಸುವಂತೆ ಫರ್ಮಾನು ಹೊರಡಿಸಿದ್ದಾರೆ.



ರಾಜ್ಯದ ಎಲ್ಲ ಅರಣ್ಯಗಳ ವ್ಯಾಪ್ತಿಯೊಳಗೆ ಸಾಕು ಪ್ರಾಣಿ ಮೇಯಿಸುವುದನ್ನು ಸಂಪೂರ್ಣ ನಿಷೇಧಿಸಲು ತಕ್ಷಣ ಕ್ರಮ ವಹಿಸುವಂತೆ ಸಚಿವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೆ (ಪಿಸಿಸಿಎಫ್)ಗೆ ಸೂಚನೆ ನೀಡಿದ್ದಾರೆ.

ರಾಜ್ಯದ ಬಹುತೇಕ ಕಡೆಗಳಲ್ಲಿ ತಲೆತಲಾಂತರದಿಂದ ಜನರು ಜಾನುವಾರುಗಳನ್ನು ಮೇಯಿಸಲು ಕಾಡುಗಳನ್ನೇ ಅವಲಂಬಿಸಿದ್ದು, ಇತ್ತೀಚೆಗೆ ಕಂದಾಯ ಭೂಮಿ ಹಾಗೂ ಗೋಮಾಳ ತಗ್ಗಿದ ಕಾರಣ ಸಾಕು ಪ್ರಾಣಿಗಳ ಮೇವಿಗಾಗಿ ಅರಣ್ಯಗಳ ಮೇಲಿನ ಅವಲಂಬನೆ ಹೆಚ್ಚಿದೆ. ಈ ಸ್ಥಿತಿಯಲ್ಲಿ ಸಚಿವರ ಈ ಮಹತ್ವದ ತೀರ್ಮಾನ ಗಮನ ಸೆಳೆದಿದೆ.

ಜಾನುವಾರುಗಳನ್ನು ಅರಣ್ಯ ಪ್ರದೇಶದೊಳಗೆ ಮೇಯಲು ಬಿಡುವುದರಿಂದ ಕಾಡಿನಲ್ಲಿ ಆಗಷ್ಟೇ



■ ತಕ್ಷಣ ಅಗತ್ಯ ಕ್ರಮ ವಹಿಸಲು ಅರಣ್ಯ ಸಚಿವರ ಖಡಕ್ ಸೂಚನೆ

■ ರಾಜ್ಯದ ಎಲ್ಲ ಅರಣ್ಯ ಪ್ರದೇಶಗಳಿಗೂ ಅನ್ವಯ

ಮೊಳಕೆಯೊಡೆದ ಚಿಕ್ಕಪುಟ್ಟ ಸಸಿಗಳು ಸಾಕು ಪ್ರಾಣಿಗಳಿಗೆ ಆಹಾರವಾಗುತ್ತಿವೆ. ಇದರಿಂದ ಅರಣ್ಯದಲ್ಲಿ ಹೊಸ ಗಿಡಗಳು ಬೆಳೆಯದೆ ಅರಣ್ಯ ಸಂವರ್ಧನೆಗೆ ಅಡ್ಡಿಯಾಗುತ್ತಿದೆ ಎಂಬ ಪರಿಸರ ಪ್ರೇಮಿಗಳು ಅಭಿಪ್ರಾಯವನ್ನು ಅವರು ತಮ್ಮ ಈ ತೀರ್ಮಾನಕ್ಕೆ ಕಾರಣವಾಗಿ ನೀಡಿದ್ದಾರೆ. ಜತೆಗೆ, ಸಾಕು ಪ್ರಾಣಿಗಳು ಕಾಡಿನಲ್ಲಿ ಮೇಯುವುದರಿಂದ ಕಾಡಿನಲ್ಲಿರುವ ಸಸ್ಯಾಹಾರಿ ಪ್ರಾಣಿಗಳಿಗೆ ಮೇವಿನ ಕೊರತೆಯಾಗುತ್ತಿದೆ. ಮುಖ್ಯವಾಗಿ, ಊರಿನಿಂದ ಕಾಡಿಗೆ ಮೇಯಲು ಬರುವ ಪ್ರಾಣಿಗಳಿಂದ ವನ್ಯಜೀವಿಗಳಿಗೆ ಸಾಂಕ್ರಾಮಿಕ ರೋಗಗಳು ಹರಡುವ ಅಪಾಯವಿದೆ ಎಂಬ ಸಮರ್ಥನೆಯನ್ನೂ ಸಚಿವರು ನೀಡಿದ್ದಾರೆ.

''ಅರಣ್ಯ ಸಂವರ್ಧನೆ ಆಗದಿದ್ದರೆ ಆ ಪ್ರದೇಶದಲ್ಲಿ ಹರಿಯುವ ನದಿಗಳ ಮೇಲೂ ಪರಿಣಾಮ ಬೀರುತ್ತದೆ. ಇದರಿಂದ ವನ್ಯಜೀವಿ-ಮಾನವ ಸಂಘರ್ಷ ಹೆಚ್ಚುತ್ತದೆ. ಕಾಡಿನೊಳಗೆ ಹೋಗುವ ದನಗಾಹಿಗಳು ವನ್ಯಜೀವಿ ದಾಳಿಯಿಂದ ಮೃತಪಟ್ಟರೆ ಪರಿಹಾರ ನೀಡಲೂ ನಿಯಮಗಳಲ್ಲಿ ಅವಕಾಶವಿಲ್ಲ. ಹಾಗಾಗಿ, ಪರಿಸರವಾದಿಗಳು ಮತ್ತು ವನ್ಯಜೀವಿ ಪ್ರೇಮಿಗಳ ಆಶಯದಂತೆ ಕಾಡುಗಳಲ್ಲಿ ಸಾಕುಪ್ರಾಣಿಗಳನ್ನು ನಿಷೇಧಿಸಲು ಕಾನೂನು ರೀತಿ ಕ್ರಮ ವಹಿಸಬೇಕು,'' ಎಂದು ನಿರ್ದೇಶನ ನೀಡಿದ್ದಾರೆ.

''ಕಾಡಿನಲ್ಲಿರುವ ವನ್ಯಜೀವಿಗಳು ಮೇಯಲು ಹೋದ ದನಕರುಗಳನ್ನು ಕೊಂದು ತಿನ್ನುತ್ತವೆ. ಇದರಿಂದ ಜನರು ಆಕ್ರೋಶಗೊಂಡು ಮೃತ ಜಾನುವಾರುಗಳ ಕಳೇಬರಕ್ಕೆ ವಿಷಹಾಕುವ ಕಾರಣ ವನ್ಯಜೀವಿಗಳು ಸಾವಿಗೀಡಾಗುತ್ತಿವೆ. ಇತ್ತೀಚೆಗೆ ಹೂಗ್ಯಂ ಅರಣ್ಯ ವಲಯದ ಮೀಣ್ಯಂ ಪ್ರದೇಶದಲ್ಲಿ ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳು ಸಾವಿಗೀಡಾಗಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಮದ್ರಾಸ್ ಹೈಕೋರ್ಟ್ ತಮಿಳುನಾಡಿನ ಅರಣ್ಯದೊಳಗೆ ಸಾಕು ಪ್ರಾಣಿಗಳನ್ನು ಮೇಯಿಸುವುದನ್ನು ನಿರ್ಬಂಧಿಸಿ ತೀರ್ಪು ನೀಡಿದ ಬಳಿಕ ನೆರೆಯ ರಾಜ್ಯದಿಂದಲೂ ನಮ್ಮ ಅರಣ್ಯ ಪ್ರದೇಶದೊಳಗೆ ದನಕರುಗಳನ್ನು ತಂದು ಕಾಡಿನಲ್ಲಿ ಮೇಯಿಸಲಾಗುತ್ತಿದೆ,'' ಎಂದು ಅವರು ಸೂಚನಾ ಟಿಪ್ಪಣಿಯಲ್ಲಿ ಉಲ್ಲೇಖಿಸಿದ್ದಾರೆ.

V-karnataka pg 07

India-U.S. trade deal: Deadlock continues over agriculture

Officials anticipate a surprise from President Trump in the negotiations, with agriculture and automotive components remaining key issues

T.C.A. Sharad Raghavan
NEW DELHI

With the August 1 deadline approaching, agriculture continues to loom large as an impediment to a trade deal between India and the U.S.

India continues to hold firm against opening up the sector to imports to protect Indian farmers, and the U.S. remains keen that the sector be opened up as such a deal would set the precedent for future deals it strikes with the EU and Japan.

Officials, however, are not ruling out a last-minute surprise from U.S. President Donald Trump, similar to what happened with Indonesia and Vietnam.

"The Indian team is back from the U.S. and has left them with what India has to offer," an official aware of the negotiations told *The Hindu*.

"Now, whether they accept the terms or not is up to them. Agriculture remains a major issue where there is lack of agreement," the official added.

India has been resisting the opening up of the agriculture sector to imports to protect domestic farmers.

According to the official, opening up the Indian market to U.S. agricultural imports is however not just about market access.



Tough call: India has been resisting the opening up of the agriculture sector to imports to protect domestic farmers. GIRI KVS

"India is one of the few countries that is pushing very hard for a deal," the official said.

Risk avoidance

"So, it is likely a deal with India will be concluded before the U.S. concludes a deal with the EU or Japan. If agriculture is excluded from the India deal, then that could set the precedent for the EU and Japan deals, and the U.S. doesn't want to risk that."

However, according to another source, the bulk of India's negotiation points are now aimed at a broader Bilateral Trade Agreement (BTA) by September or October this year, rather than a 'mini deal' before August 1. Yet, the government is prepared for a surprise deal announced by U.S. President Donald Trump.

"See what happened with Indonesia and Vietnam; the U.S. President announced details of the deal that both Indonesian and Vietnamese negotiators said were not part of what they agreed to," the second source said.

"This was done after a phone conversation between Mr. Trump and the heads of Indonesia and Vietnam, respectively. The same can always pop up with India; we have not ruled it out."

Key hurdle

Both sources confirmed that, while agriculture and dairy remain hurdles from the Indian side, a key hurdle from the U.S. side is their reluctance to reduce import duties on automotive components to zero.

Hindu Pg 05

ಸಾಂಪ್ರದಾಯಿಕ ಜೇನುತುಪ್ಪಕ್ಕೆ ಆಧುನಿಕ ಟ್ವಿಸ್ಟ್

ಜೇನುತುಪ್ಪ ಈಗ ನಾನಾ ಆಹಾರ ಪದಾರ್ಥಗಳಲ್ಲಿ ಯಥೇಚ್ಛವಾಗಿ ಬಳಕೆಯಾಗುತ್ತಿದ್ದು, ನೈಸರ್ಗಿಕ ಸಿಹಿ ಜತೆಗೆ ಆರೋಗ್ಯಕರವಾಗಿ ಆಹಾರ ಪ್ರಿಯರನ್ನು ಆಕರ್ಷಿಸಿದೆ.



ಲವಲvk ಸುದ್ದಿಲೋಕ
feedbacklvk@vijaykarnataka.com

ಜೇನುತುಪ್ಪ ಈಗ ಕೇವಲ ಆರೋಗ್ಯಕರ ಸಿಹಿಕಾರಕವಲ್ಲ, ಬದಲಾಗಿ ರುಚಿ ಹೆಚ್ಚಿಸುವ ಪದಾರ್ಥವಾಗಿ ಅದು ಯುವಜನತೆಯನ್ನು ಸೆಳೆದಿದೆ. ಅವರು ಸಿಹಿ ಬಳಸುವ ಆಹಾರ ಪದಾರ್ಥಗಳಲ್ಲಿ ಸಕ್ಕರೆ ಬದಲು ಬೆಲ್ಲಕ್ಕೆ ಶಿಫ್ಟ್ ಆಗಿದ್ದಾರೆ. ಆದರೆ ವಿಶಿಷ್ಟ ರುಚಿ, ಸುವಾಸನೆಯ ಜೇನುತುಪ್ಪದತ್ತವೂ ವಿಶೇಷ ಗಮನ ಹರಿಸಿದ್ದಾರೆ. ಅದರಲ್ಲೂ ಆಧುನಿಕ ರೆಸಿಪಿಗಳಲ್ಲಿ ಜೇನುತುಪ್ಪ ವಿಶೇಷ ಸ್ವಾದದೊಂದಿಗೆ ಜಾದು ಮಾಡಿದೆ.

ನಾನಾ ಪಾಕ ಪದ್ಧತಿಯಲ್ಲಿ ಜೇನುತುಪ್ಪ ಪ್ರಮುಖ ಸ್ಥಾನ ಪಡೆಯುತ್ತಿದ್ದು, ಈ ವರ್ಷದ ಪಾಕಶಾಲೆಯ ಟ್ರೆಂಡ್‌ನಲ್ಲಿ ಜೇನುತುಪ್ಪ ಪ್ರಮುಖ ಪದಾರ್ಥವಾಗಿ ಹೊರಹೊಮ್ಮಿದೆ. ನೈಸರ್ಗಿಕ ಸಿಹಿ, ಆರೋಗ್ಯ ಗುಣ, ರುಚಿ, ಸುವಾಸನೆಯೊಂದಿಗೆ ಬೆರೆತ ಜೇನುತುಪ್ಪ ವಿಶಿಷ್ಟ ಹಾಗೂ ಸ್ಮರಣೀಯ ಎನಿಸುವ ಖಾದ್ಯಗಳಲ್ಲಿ ಪ್ರಮುಖ ಸ್ಥಾನ ಗಳಿಸುತ್ತಿದೆ ಎಂದಿದ್ದಾರೆ ಆಹಾರ ತಜ್ಞರು.

ರುಚಿಯ ವ್ಯಾಪ್ತಿ ಹೆಚ್ಚಳ

ಆರೋಗ್ಯಕರ ಗುಣವಿರುವ ಜೇನುತುಪ್ಪ ಔಷಧ ರೂಪದಲ್ಲಿ ಅಥವಾ ಸಾಂಪ್ರದಾಯಿಕ ಪಾನೀಯ, ಅಡುಗೆ ಬಳಕೆಗೆ ಸೀಮಿತವಾಗಿತ್ತು. ಆದರೆ ನಿಧಾನವಾಗಿ ಕೇಕ್, ಐಸ್ ಕ್ರೀಮ್‌ಗಳ ಮೇಲೆ ತನ್ನ ರುಚಿ ಉಣಬಡಿಸಲು ಆರಂಭಿಸಿದ ಜೇನುತುಪ್ಪ ಈಗ ಹಲವು ಆಹಾರ ಪದ್ಧತಿಗಳಲ್ಲಿ ವಿಭಿನ್ನ ಮಿಶ್ರಣವಾಗಿ ರುಚಿಯ ವ್ಯಾಪ್ತಿ ಹೆಚ್ಚಿಸಿಕೊಂಡಿದೆ. 2025ರಲ್ಲಿ ಜೇನುತುಪ್ಪವು ಪಾಕಶಾಸ್ತ್ರದಲ್ಲಿ ಹೊಸ ಅವಿಷ್ಕಾರಗಳಿಗೆ ಮತ್ತು ರುಚಿಕರ ಖಾದ್ಯಗಳಿಗೆ ಪ್ರೇರಣೆಯಾಗಲಿದೆ ಎಂಬುದು ಬಾಣಸಿಗರ ಅಭಿಪ್ರಾಯ.

ಪೇಯಗಳೂ ಮಧುಮಯ

ಕಾಫಿ, ಟೀ ಮತ್ತಿತರ ಪಾನೀಯಗಳು ಮತ್ತು ಕಾಕ್‌ಟೇಲ್‌ಗಳ ಸ್ವಾದದಲ್ಲೂ ಜೇನಿಗೆ ಪ್ರಮುಖ ಸ್ಥಾನ ಇದೆ. ಮಾಂಸ್ಟ್ರ ತರಕಾರಿಗಳು ಮತ್ತು ಇತರ ಖಾದ್ಯಗಳಿಗೆ ಸಾಸ್, ಮ್ಯಾರಿನೇಡ್ ಮತ್ತು ಗ್ಲೇಜ್‌ಗಳಿಗೆ ಜೇನುತುಪ್ಪವನ್ನು ಹೆಚ್ಚಾಗಿ ಸೇರಿಸಲಾಗುತ್ತದೆ. ಸಿಹಿ ಆಲೂಗಡ್ಡೆ ಫೈ ಮೇಲೆ ಜೇನುತುಪ್ಪ ಚಿಮುಕಿಸಲಾಗುತ್ತದೆ. ಸ್ಯಾಂಡ್‌ವಿಚ್‌ನಲ್ಲಿಯೂ ಇದನ್ನು ಬಳಸಲಾಗುತ್ತಿದ್ದು, ಬೇಕಿಂಗ್ ಮತ್ತು ಸಿಹಿ ತಿಂಡಿಗಳಲ್ಲಿ ಜೇನುತುಪ್ಪವನ್ನು ಸಂಸ್ಕರಿಸಿದ ಸಕ್ಕರೆಗೆ ನೈಸರ್ಗಿಕ ಪರ್ಯಾಯವಾಗಿ ಬಳಸಲಾಗುತ್ತದೆ. ಒಟ್ಟಿನಲ್ಲಿ ಜೇನುತುಪ್ಪ ತನ್ನ ಸಿಹಿ ಮತ್ತು ವಿಶಿಷ್ಟ ಪರಿಮಳದಿಂದ ಯಾವುದೇ ಆಹಾರ ಪದಾರ್ಥಕ್ಕೆ ವಿಶೇಷ ಟ್ವಿಸ್ಟ್ ನೀಡುತ್ತದೆ.

ಜೇನುತುಪ್ಪದ ಸವಿ

ಮೆಣಸಿನಕಾಯಿಯೊಂದಿಗೆ ಬೆರೆಸಿದ ಜೇನುತುಪ್ಪವು ಸಿಹಿ ಮತ್ತು ಖಾರ ಮಿಶ್ರಣ ನೀಡುವ ಹಾಟ್ ಹನಿ ಈಗ ಹದಿಹರೆಯದವರ ಫೇವರಿಟ್ ರುಚಿ ಎನಿಸಿದೆ. ಜೇನುತುಪ್ಪ, ಒಣ ಹಣ್ಣು ಮತ್ತು ಮಸಾಲೆಗಳ ಸಂಯೋಜನೆ ಹೊಸ ರುಚಿ ನೀಡುತ್ತದೆ. ಜೇನುತುಪ್ಪ ಚಿಮುಕಿಸಿದ ಪಾಪ್‌ಕಾರ್ನ್, ಲ್ಯಾವೆಂಡರ್, ಗುಲಾಬಿಯಂತಹ ಹೂವಿನ ಪರಿಮಳಗಳನ್ನು ಜೇನುತುಪ್ಪದೊಂದಿಗೆ ಸೇರಿಸಿ ವಿಶಿಷ್ಟ ಸಿಹಿ ಪದಾರ್ಥಗಳನ್ನು ತಯಾರಿಸಬಹುದು. ಉದಾಹರಣೆಗೆ ಲ್ಯಾವೆಂಡರ್ ಹನಿ ಪನ್ನಾಕೋಟಾ. ಏಲಕ್ಕಿ, ದಾಲ್ಚಿನ್ನಿ, ಲವಂಗ, ಶುಂಠಿಯಂತಹ ಮಸಾಲೆಗಳನ್ನು ಜೇನುತುಪ್ಪದೊಂದಿಗೆ ಸೇರಿಸಿ ಕೇಕ್, ಕುಕೀಸ್, ಪುಡ್ಡಿಂಗ್‌ಗಳಿಗೆ ಹೊಸ ರುಚಿ ನೀಡಬಹುದು. ■



ಸಕ್ಕರೆಗೆ ಪರ್ಯಾಯ ಬಳಕೆ

ಜೇನುತುಪ್ಪ ಕೇವಲ ಸಿಹಿಕಾರಕ ಮಾತ್ರವಲ್ಲದೆ, ಆರೋಗ್ಯಕರ ಪೋಷಕಾಂಶಗಳನ್ನು ಹೊಂದಿ ಆಹಾರಕ್ಕೆ ನೈಸರ್ಗಿಕ ಮತ್ತು ವಿಶಿಷ್ಟ ರುಚಿ ನೀಡುತ್ತದೆ. ವಿಟಮಿನ್, ಖನಿಜ, ಉತ್ಕರ್ಷಣ ನಿರೋಧಕಗಳನ್ನು ಒಳಗೊಂಡಿರುವ ಈ ನೈಸರ್ಗಿಕ ಸಿಹಿಕಾರಕ ರೋಗನಿರೋಧಕ ಶಕ್ತಿ ಹೆಚ್ಚಿಸುವ ಗುಣಗಳನ್ನು ಹೊಂದಿದೆ. ಹೀಗಾಗಿ ನಿತ್ಯದ ಬಳಕೆಯಲ್ಲಿ ಜೇನುತುಪ್ಪ ಇದ್ದರೆ ಉತ್ತಮ. ತಿನಿಸುಗಳಲ್ಲಿ ಸಕ್ಕರೆ ಪಾಕದ ಬದಲು ಜೇನುತುಪ್ಪ ಬಳಸಿ. ಬೆಳಗ್ಗಿನ ಉಪಾಹಾರದಲ್ಲಿ ಇದನ್ನು ಸೇರಿಸಿ. ಐಸ್ ಕ್ರೀಮ್ ಮೇಲೆ ಜೇನುತುಪ್ಪ ಸುರಿದು ಸವಿಯಿರಿ.

V-karnataka pg 12

Pesticide overuse fuels drastic drop in bird species

BOSKY KHANNA @Bengaluru

INCREASING and unregulated use of chemicals like insecticides and pesticides – especially neonicotinoids – and change in agricultural patterns have drastically affected grassland bird species across India. This is compromising soil nutrient cycle, pollination, seed dispersal and eco-system engineering in which the threatened bird species play a key role. This is bound to have an adverse impact on public health ultimately, says a study by Bengaluru-based National Centre for Biological Sciences (NCBS).



The NCBS researchers point out that avian species are not just aesthetically important, but are valuable tools in the large food-chain and agricultural pattern. They feed on insects, bees and other pests. They noted that while many western countries have banned the use of pesticides and fertilizers, unregulated usage continues in India, affecting local and migratory bird species.

Similar is the case with the continued use of banned drugs like the Diclofenac and non-steroidal anti-inflammatory drugs (NSAIDs) - painkillers given to cattle and consumed by humans. This has forced a drastic decline in populations of all six Indian vulture species.

Neonicotinoids are a class of insecticides chemically similar to nicotine, and are being rampantly used in agriculture and veterinary medicine. They are absorbed by plants and transported throughout their tissues, including pollen and nectar. **CONTINUED ON P5**

Long-term decline in 204 bird species

Researchers assessed the status of 942 bird species. The report highlighted that 204 bird species suffered long-term decline and 142 species were facing a current decline

Ind Exp pg 01

Birds like tawny eagle, Indian bustard at risk from toxic farmlands

CONTINUED FROM PAGE 1

NEONICOTINOIDS have raised concerns due to their potential harm to beneficial insects like bees and other pollinators, and bird species dependent on them.

The NCBS study points to rampant and unregulated use of neonicotinoids, depriving grassland and raptor bird species like the Tawny Eagle, Greater Spotted Eagle, Saras Crane, Great Indian Bustard, Indian Roller, Bengal Florican and Common Pochard, of their prey. This has forced a decline in populations of these bird species.



The report noted the drastic decline in wetland and aquatic bird species including the Northern Pintail Duck, Tufted Duck, Greater Flamingo, Sarus Crane, Eurasian Spoonbill, Black-capped Kingfisher, Greater Flamingo, Baillon's Crake, Sarus Crane, Spot-billed Pelican, Eurasian Spoonbill, Lesser Adjutant, Painted Stork and Pied Kingfisher. The study, based on data from 2000 to 2023, stated that this was because of pollution in water bodies, silt accumulation, contamination, agricultural pollution, unscientific desilting and poor lake rejuvenation methods where there is no spillway and increased use of concrete.

Vivek Ramachandran, co-author of the study, says population loss in birds with specialised diets – like those feeding on vertebrates, carrion or invertebrates – has averaged over 25%. In contrast, species dependent on fruits or nectar have remained stable or even increased.

He said birds play a very important role in the health of people and in the ecosystem, and indicate the health of the community.

The NCBS study, "State of India's Birds: 2023: A framework to leverage semi-structured citizen science for bird conservation", was published in Ecosphere, an ESA Open Access Journal, on July 17, 2025, and released to the public on Tuesday.

Researchers assessed the status of 942 bird species using data contributed by scores of bird watchers on eBird. It highlighted that 204 bird species suffered long-term decline and 142 species were facing a current decline. Also, 178 bird species have been classified as 'high conservation priority', 323 species are listed as 'moderate priority' and 441 are listed as 'low priority'.

Dec Hrd pg 07

Fireflies face extinction, count dips 76% in 1 yr

NARENDRA SETHI @Dehradun

THE twinkling fireflies (jugnu), once a staple of 1980s' Bollywood films and children's bedtime stories, face an existential crisis. A recent nationwide census, conducted by two scientists in collaboration with the Wildlife Institute of India (WII), has revealed a drastic and concerning 76 percent decline in their numbers across the country within just one year, pushing these enchanting insects to the brink of extinction.

The grim reality came to light following the census initiated by Senior Professor Dr. Virendra Prasad Uniyal and Dr. Nidhi Rana of Graphic Era University in Dehradun. Their extensive efforts across 22 states revealed a total of just 6,139 fireflies this time, a sharp drop from previous observations.

"The relentless march of materialism and the resultant light pollution have been identified as the primary culprits behind this alarming disappearance," Dr. Uniyal told this daily. He emphasised that the artificial glow emanating from expanding urban centres is proving fatal for these nocturnal creatures.

Utilising special QR codes and links, the researchers engaged 232 participants from 22 states, including Uttarakhand, Kerala, Rajasthan, Uttar Pradesh, Karnataka, Gujarat, Punjab, Jharkhand, Bihar, and Himachal Pradesh, in this citizen science initiative.

Dr Uniyal said the findings are stark. "This time, only 6,139 fireflies were recorded. This is a very low number compared to last year, when approximately 26,000 fireflies were found across 20 states."

Constant artificial illumination disrupts their natural cycles and, critically, their ability to find mates. For fireflies, which rely on their distinctive bioluminescent signals for reproduction, this environmental interference is proving fatal."What we once only spoke of in stories is now rapidly becoming a distant memory."

Dr. Uniyal flagged the urgency of the situation. "This rapid decline, especially the 76 percent drop in just one year, is a stark warning for our ecosystem. Nature's beautiful glow is fading, and we must understand the implications of this loss."

The study's revelations have ignited fresh concerns among environmentalists about the impact of unchecked development on biodiversity. He said, "The main reasons for this include the destruction of habitats, excessive use of artificial night light, increasing use of pesticides and chemical fertilisers in agricultural areas, and pollution of water sources." These have a devastating impact on the fireflies' delicate life cycle, he added.

